# ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ನಾ.ನೃ.ಸಂ.ವಿ:ಪ್ರ.ಕಾ.ಸ್ವ.ಕಾ:01:2014-15 ದಿನಾಂಕ: 23 ನೇ ಜೂನ್ 2014

ಉಡುಪಿ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖಾ ಉಪನಿರ್ದೇಶಕರ ಕಛೇರಿ, ಉಡುಪಿ
0 3 JUL 2014

## : ಜ್ಞಾಪನ :

**ವಿಷಯ:** 2014-15ನೇ ಸಾಲಿನಲ್ಲಿ ರಾಜ್ಯದ ಮುಂದುವರೆದ ಯೋಜನಾ ಕಾರ್ಯಕ್ರಮದ ಅಡಿಯಲ್ಲಿ ಕ್ಲಸ್ಟರ್, ತಾಲ್ಲೂಕು, ಜಿಲ್ಲಾ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರಿ ಆದೇಶದ ಸಂಖ್ಯೆ:ಇಡಿ:63:ಯೋಯೋಕ:2013, ದಿನಾಂಕ:01.04.2013
2] ಈ ಕಛೇರಿ ಪತ್ರ ಸಂ:ಯೋ[1]ಮು.ಯೋ.ಕಾ:ಹ.ಬಿ:02:2013-14, ದಿ:09.04.2013.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿಭಾ ಕಾರಂಜಿ ಸ್ಪರ್ಧೆಯು 2002ನೇ ಸಾಲಿನಿಂದ ನಡೆದುಕೊಂಡು ಬರುತ್ತಿದ್ದು, ಮಕ್ಕಳಲ್ಲಿ ಹುದುಗಿರುವ ಪ್ರತಿಭೆ, ಸೃಜನಾತ್ಮಕ ಕೌಶಲ್ಯಗಳನ್ನು ಹೊರತರಲು ಉತ್ತಮ ವ್ಯವಸ್ಥೆ ಹಾಗೂ ವೇದಿಕೆಯಾಗಿದೆ. 2014-15ನೇ ಸಾಲಿನಲ್ಲಿ ರಾಜ್ಯ ವಲಯದ ಮುಂದುವರೆದ ಯೋಜನಾ ಕಾರ್ಯಕ್ರಮದಡಿಯಲ್ಲಿ ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲಾ ಮಟ್ಟದ [1ನೇ ತರಗತಿಯಿಂದ 10ನೇ ತರಗತಿ] ಮಕ್ಕಳಿಗೆ ಏಕರೀತಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸ್ಪರ್ಧೆಗಳನ್ನು ನಡೆಸುವ ಬಗ್ಗೆ ಉಲ್ಲೇಖದಲ್ಲಿ ತೋರಿಸಿರುವ ಆದೇಶದಂತೆ ತೀರ್ಮಾನಿಸಲಾಗಿದೆ. ಸ್ಪರ್ಧೆಗಳನ್ನು ನಡೆಸುವ ವಿಧಾನ ಮತ್ತು ಅವಧಿಯನ್ನು ಕುರಿತಂತೆ ಜ್ಞಾಪನದಲ್ಲಿ ನಮೂದಿಸಿರುವ ಅನುಬಂಧ-01, 02, 03 ಹಾಗೂ 04ರಲ್ಲಿ ಕೂಲಂಕಷವಾಗಿ ವಿವರಿಸಲಾಗಿದ್ದು, ಅದರಂತೆ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಅನುಸರಿಸಲು ಸೂಚಿಸಿದೆ.

**<u>ಅಯವ್ಯಯವನ್ನು ಅನುಬಂದ-03ರಲ್ಲಿ ತೋರಿಸಿರುವ ಲೆಕ್ಕ ಶೀರ್ಷಿಕೆಯಡಿ ಭರಿಸತಕ್ಕದ್ದು.</u>**

***ಸಾಮಾನ್ಯ ಸೂಚನೆಗಳು:-***

*01.* ಅನುಬಂಧಗಳಲ್ಲಿ ನೀಡಿರುವ ಸೂಚನೆ / ವಿಶೇಷ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

*02.* ಸ್ಪರ್ಧೆಗಳನ್ನು ಕಡ್ಡಾಯವಾಗಿ ನಡೆಸುವುದು. ಇಲ್ಲವಾದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರುಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

*03.* ಎಲ್ಲಾ ಶಾಲೆಯಿಂದಲೂ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು.

*04.* ಮಕ್ಕಳ ಸುರಕ್ಷತೆ ಹಾಗೂ ಸಾರಿಗೆ ವ್ಯವಸ್ಥೆಯಲ್ಲಿ ಅಹಿತಕರ ಘಟನೆಗಳು ಸಂಭವಿಸದಂತೆ ಮುಖ್ಯಶಿಕ್ಷಕರು, ಶಿಕ್ಷಕರು ಹಾಗೂ ಅಧಿಕಾರಿಗಳು ಮುಂಜಾಗ್ರತ ಕ್ರಮ ಕೈಗೊಳ್ಳುವುದು ಇಲ್ಲವಾದಲ್ಲಿ ಸಂಪೂರ್ಣ ಹೊಣೆ ಅವರದೇ ಆಗಿರುತ್ತದೆ.

*05.* ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕಾಗಿ ರೂಪಿಸುವ ಸಮಿತಿಗಳಲ್ಲಿ ಎಲ್ಲಾ ಕ್ಷೇತ್ರದ ವ್ಯಕ್ತಿಗಳನ್ನು ಪ್ರಾತಿನಿಧಿಕವಾಗಿ ಸೇರಿಸಬೇಕು. ಉದಾ: ಸಾಹಿತಿಗಳು, ಕಲಾವಿದರು, ಪತ್ರಿಕಾ ಸಂಪಾದಕರೂ ಹಾಗೂ ಮುಂತಾದವರು.

*06.* ಜ್ಞಾಪನ ತಲುಪಿದ ಕೂಡಲೇ ಕ್ಲಸ್ಟರ್ ಮತ್ತು ಬ್ಲಾಕ್ ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳವರು, ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು ಕಾರ್ಯೋನ್ಮುಖರಾಗಿ ಪೂರ್ವಭಾವಿ ತಯಾರಿಯೊಂದಿಗೆ ಸಮಿತಿ ಅಧ್ಯಕ್ಷರುಗಳು, ನೋಡಲ್ ಅಧಿಕಾರಿಗಳು ಮುಂತಾದವರ ನೇಮಕ ಮಾಡಿ ಸಭೆಯನ್ನು ನಡೆಸಿ ವ್ಯವಸ್ಥಿತ ಯೋಜನೆ ರೂಪಿಸಿಕೊಳ್ಳುವುದು. ನೋಡಲ್ ಅಧಿಕಾರಿಗಳು ಮತ್ತು ಸಂಬಂಧಿಸಿದ ಕಾರ್ಯನಿರ್ವಾಹಕರ ದೂರವಾಣಿ ಸಂಖ್ಯೆಯನ್ನು ಹಿರಿಯ ಸಹಾಯಕ ನಿರ್ದೇಶಕರು, [ನಾಟಕ ನೃತ್ಯ ಮತ್ತು ಸಂಗೀತ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಒದಗಿಸುವುದು.

*07.* ಪಕ್ಷಪಾತ, ಉದಾಸೀನತೆ, ಅಸಮರ್ಥ ತೀರ್ಪುಗಾರರ ನೇಮಕ, ಸಮಯಕ್ಕೆ ಸರಿಯಾಗಿ ಮಾಹಿತಿ ನೀಡದಿರುವಿಕೆ, ಮಕ್ಕಳ ಸುರಕ್ಷತೆ ಮುಂತಾದ ವಿಷಯಗಳ ಬಗ್ಗೆ ದೂರು ಬಾರದಂತೆ ಎಚ್ಚರವಹಿಸುವುದು.

*08.* ಎಲ್ಲಾ ಹಂತದ ಕಾರ್ಯಕ್ರಮಗಳನ್ನು ನಿಗಧಿಪಡಿಸಿದ ದಿನಾಂಕಗಳಲ್ಲೇ ಮುಕ್ತಾಯಗೊಳಿಸಬೇಕು.

### *01] ಸಂಘಟನಾ ನಿಯಮಗಳು:*

ಸಂಘಟನೆಯಲ್ಲಿ ಯಾವುದೇ ಲೋಪಬಾರದಂತೆ ಎಚ್ಚರವಹಿಸಬೇಕು. ಬ್ಲಾಕ್ ಸಂಘಟನಾ ಸಮಿತಿಯಲ್ಲಿ ಕ್ಷೇತ್ರದ ಎಂ.ಎಲ್.ಎ ರವರು ಜಿಲ್ಲಾ ಮಟ್ಟದ ಸಮಿತಿಯಲ್ಲಿ ಎಂ.ಪಿ/ ಉಸ್ತುವಾರಿ ಮಂತ್ರಿ / ಜಿಲ್ಲಾ ಮಂತ್ರಿಯವರು ಅಧ್ಯಕ್ಷರಾಗಿರುತ್ತಾರೆ. ಆಯಾ ಹಂತದಲ್ಲಿನ ಪ್ರಧಾನ ಅಧಿಕಾರಿಗಳು, ಪ್ರತಿಷ್ಠಿತ ವ್ಯಕ್ತಿಗಳು ಸದಸ್ಯರಾಗಿರುವ ಈ ಸಮಿತಿಗೆ ಬ್ಲಾಕ್ ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯವರು ಮತ್ತು ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು [ಆಡಳಿತ] ಕಾರ್ಯದರ್ಶಿಯಾಗಿರುತ್ತಾರೆ.

### *02] ಪ್ರಚಾರ:*

ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ವ್ಯಾಪಕ ಪ್ರಚಾರ ದೊರೆಯಬೇಕು. ಈ ನಿಟ್ಟಿನಲ್ಲಿ ಕಾರ್ಯಕ್ರಮದ ಮಹತ್ವ ಹಾಗೂ ನಡೆಯುವ ದಿನಾಂಕವನ್ನು ಪ್ರಚಾರ ಮಾಧ್ಯಮಗಳಾದ ಪತ್ರಿಕೆ, ಆಕಾಶವಾಣಿ ಹಾಗೂ ಮುಂತಾದವುಗಳ ಮೂಲಕ ಸಾಕಷ್ಟು ಪ್ರಚಾರ ನೀಡಬೇಕು. ಕಾರ್ಯಕ್ರಮ ನಡೆಸುವ ಹಿಂದಿನ ದಿನ ಸ್ಥಳೀಯ ಮಕ್ಕಳಿಂದ ಮೆರವಣಿಗೆ ಏರ್ಪಡಿಸಿ ಸಾರ್ವಜನಿಕರ ಗಮನ ಸೆಳೆಯುವುದು. ಒಟ್ಟಾರೆ, ಈ ಕಾರ್ಯಕ್ರಮವು ಕರ್ನಾಟಕ ರಾಜ್ಯ ಮಕ್ಕಳ ಹಬ್ಬವಾಗಿ ಆಚರಿಸುವಂಥ ವಾತಾವರಣವನ್ನು ಪ್ರಚಾರ ಮೂಲಕ ಕಲ್ಪಿಸಬೇಕು.

***03] ವಿವಿಧ ಸಮಿತಿಗಳು:***

ಸಂಘಟನಾ ಸಮಿತಿಯು ಈ ಕೆಳಕಂಡ ಸಮಿತಿಗಳನ್ನು ರಚಿಸಿ ಆಯಾ ಸಮಿತಿಗಳಿಗೆ ನಿರ್ಧಿಷ್ಟ ಕಾರ್ಯಭಾರಗಳನ್ನು ವಹಿಸಿ ಸಕಾಲದಲ್ಲಿ ಕಾರ್ಯಗತಗೊಳ್ಳುವಂತೆ ನೋಡಿಕೊಳ್ಳಬೇಕು.

[01] ಸ್ವಾಗತ ಸಮಿತಿ.
[02] ಕ್ರಿಯಾ ಸಮಿತಿ
[03] ಆಹಾರ ಸಮಿತಿ
[04] ನೋಂದಣಿ ಸಮಿತಿ
[05] ಮಕ್ಕಳ ಸುರಕ್ಷತೆ ಹಾಗೂ ರಕ್ಷಣಾ ಸಮಿತಿ
[06] ಕಾನೂನು ಶಿಸ್ತುಪಾಲನಾ ಸಮಿತಿ
[07] ಸಾರಿಗೆ ಸಮಿತಿ
[08] ವಸತಿ ಸಮಿತಿ
[09] ರಂಗವೇದಿಕೆ / ಸಂಭಾಂಗಣ ಸಮಿತಿ
[10] ತೀರ್ಪುಗಾರರ ಮಂಡಳಿ ಸಮಿತಿ.
[11] ಆರ್ಥಿಕ ಸಮಿತಿ
[12] ಬೆಳಕು, ಧ್ವನಿವರ್ಧಕ, ತಾಂತ್ರಿಕ ನಿರ್ವಹಣಾ ಸಮಿತಿ.
[13] ಪ್ರಚಾರ ಸಮಿತಿ.

ಆಯಾ ಕ್ಷೇತ್ರದಲ್ಲಿ ಅನುಭವವಿರುವ ಕ್ರಿಯಾ ಶೀಲ ವ್ಯಕ್ತಿಗಳನ್ನೇ ಸಮಿತಿಗಳ ಅಧ್ಯಕ್ಷರು ಹಾಗೂ ಸದಸ್ಯರುಗಳಾಗಿ ನೇಮಕ ಮಾಡಬೇಕು.

***04] ತೀರ್ಪುಗಾರರ ನೇಮಕ:***

ತೀರ್ಪುಗಾರರ ನೇಮಕ ಒಂದು ವಿಶಿಷ್ಟವಾದುದು ಹಾಗೂ ಗಂಭೀರವಾದುದು. ಪ್ರತಿಭೆಗೆ ನ್ಯಾಯ ಒದಗಿಸುವ ಉತ್ಕೃಷ್ಟ ಮನೋಭಾವ ಮತ್ತು ಆಯಾ ಕ್ಷೇತ್ರಗಳಲ್ಲಿ ತಿಳುವಳಿಕೆ ಉಳ್ಳವರನ್ನೇ ನೇಮಿಸಬೇಕು. ತೀರ್ಪುಗಾರರು ಸ್ಪರ್ಧಾರ್ಥಿಗಳ ಬಂಧುಗಳಾಗಿರಬಾರದು. ಅದೇ ಶಾಲೆಯವರಾಗಿರಬಾರದು. ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಸಂಗೀತ, ನೃತ್ಯ ನಾಟಕ, ಚಿತ್ರಕಲೆ, ವಿಜ್ಞಾನ ಕ್ರಾಫ್ಟ್ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನೇ ಕಡ್ಡಾಯವಾಗಿ ನೇಮಕ ಮಾಡಿಕೊಳ್ಳುವುದು. ಅಗತ್ಯ ಶಿಕ್ಷಕರು ಲಭ್ಯವಿಲ್ಲದಿದ್ದರೆ ಸ್ಥಳೀಯ ಕಲಾವಿದರು ಹಾಗೂ ನಿವೃತ್ತ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು ತೀರ್ಪುಗಾರರಿಂದ ನಮ್ಮ ಹತ್ತಿರದ ಬಂಧು / ವಿದ್ಯಾರ್ಥಿಗಳು ಸದರಿ ಸ್ಪರ್ಧೆಯಲ್ಲಿ ಭಾಗವಹಿಸುತ್ತಿಲ್ಲವೆಂಬ ಘೋಷಣಾ ಪತ್ರ ಪಡೆದುಕೊಳ್ಳಬೇಕು. ಹಾಗೂ ಹೊಣೆಗಾರಿಕೆ ನಿಗದಿಪಡಿಸುವುದು.

***05] ಸ್ಪರ್ಧೆಗಳ ನಿಯಮಗಳು:***

***01.*** ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರುಗಳ [ಆಡಳಿತ] ನೇತೃತ್ವದಲ್ಲಿ ಸ್ಪರ್ಧೆಗಳನ್ನು ನಡೆಸಬೇಕು.

***02.*** ಕ್ಲಸ್ಟರ್, ಬ್ಲಾಕ್ ಹಾಗೂ ಜಿಲ್ಲಾ ಮಟ್ಟದ ಸ್ಪರ್ಧೆಗಳಿಗೆ ಸಂಬಂಧಿಸಿದಂತೆ ಸುತ್ತೋಲೆಗಳನ್ನು ಆಗಿಂದಾಗ್ಗೆ ಶೀಘ್ರವಾಗಿ ಕಳುಹಿಸಿ ಮಕ್ಕಳು ಹೆಚ್ಚಿನ ರೀತಿಯಲ್ಲಿ ಭಾಗವಹಿಸಲು ಕ್ರಮ ತೆಗೆದುಕೊಳ್ಳಬೇಕು.

***03.*** ವಿದ್ಯಾರ್ಥಿಗಳಿಂದ ಯಾವುದೇ ರೀತಿಯ ಶುಲ್ಕವನ್ನು ವಸೂಲಿ ಮಾಡಬಾರದು.

***04.*** ಯಾವುದೇ ಮಟ್ಟದ ಸ್ಪರ್ಧೆಗಳಲ್ಲಿ ಧ್ವನಿ ಸುರುಳಿ [ಕ್ಯಾಸೆಟ್] ಸಿ.ಡಿ., ಉಪಯೋಗಿಸಬಾರದು.

***05.*** ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಈ ಕೆಳಕಂಡ ದಿನಾಂಕಗಳಲ್ಲಿ ಕಡ್ಡಾಯವಾಗಿ ನಡೆಸಲು ಸೂಚಿಸಿದೆ.

(01) ಶಾಲಾ ಮಟ್ಟದ ಸ್ಪರ್ಧೆಗಳು : 21–07–2014 ಮತ್ತು 22–07–2014
(02) ಕ್ಲಸ್ಟರ್ ಮಟ್ಟದ ಸ್ಪರ್ಧೆಗಳು : 08–08–2014 ಮತ್ತು 09–08–2014
(03) ಬ್ಲಾಕ್ ಮಟ್ಟದ ಸ್ಪರ್ಧೆಗಳು : 27–08–2014 ಮತ್ತು 28–08–2014
(04) ಜಿಲ್ಲಾ ಮಟ್ಟದ ಸ್ಪರ್ಧೆಗಳು : 10–11–2014 ಮತ್ತು 11–11–2014

***06.*** ವೈಯಕ್ತಿಕ ವಿಷಯಗಳಲ್ಲಿ ಪ್ರಥಮ ಸ್ಥಾನ ಹಾಗೂ ಸಾಮೂಹಿಕ ವಿಷಯಗಳಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿ / ತಂಡವನ್ನು ಮಾತ್ರ ಮುಂದಿನ ಮಟ್ಟದ ಸ್ಪರ್ಧೆಗೆ ಆಯ್ಕೆ ಮಾಡಬೇಕು.

***07.*** ತೀರ್ಪುಗಾರರ ಸಮಿತಿ, ಸಭೆಗಳನ್ನು ನಡೆಸಿ ಎಲ್ಲರ ಅಭಿಪ್ರಾಯದೊಂದಿಗೆ ಮಾರ್ಗಸೂಚಿ ತಯಾರಿಸಿ ಸ್ಪರ್ಧೆಗಳಿಗಾಗಿ ನೀಡಬೇಕಾದ ಅಂಕ ಹಾಗೂ ಗಮನಿಸಬೇಕಾದ ಅಂಶಗಳು ಎಲ್ಲವನ್ನು ಪಟ್ಟಿಮಾಡಿ ಪ್ರತಿ ತೀರ್ಪುಗಾರರಿಗೆ ವಿತರಿಸುವುದು. ಅದರಂತೆ ತೀರ್ಪುಗಾರರು ಕ್ರಮ ತೆಗೆದುಕೊಳ್ಳುವುದು.

***08.*** ವಿಜೇತರ ಪಟ್ಟಿ ಸಲ್ಲಿಕೆಗೆ ಕಡೆಯ ದಿನಾಂಕಗಳು:

(01) ಶಾಲೆಯಿಂದ ಕ್ಲಸ್ಟರ್‌ಗೆ : ದಿನಾಂಕ: 28–07–2014
(02) ಕ್ಲಸ್ಟರ್‌ನಿಂದ ಬ್ಲಾಕ್‌ಗೆ : ದಿನಾಂಕ: 16–08–2014

(03) ಬ್ಲಾಕ್‌ನಿಂದ ಜಿಲ್ಲೆಗೆ : ದಿನಾಂಕ: 03–11–2014

***ವಿಶೇಷ ಸೂಚನೆ:***

ತೀರ್ಪುಗಾರಿಕೆಯಲ್ಲಿ ಅತ್ಯಂತ ಪಾರದರ್ಶಕತೆ ಇರಬೇಕು. ಎಲ್ಲಾ ವಿಷಯಗಳಲ್ಲಿಯೂ ಅಡಕವಾಗಿರುವ ಮಹತ್ವದ ಅಂಶಗಳನ್ನು ಗಮನಿಸಿ ಅಂಕ ನೀಡಬೇಕು. ತೀರ್ಪುಗಾರರಾದ ತಮ್ಮ ಸಂಬಂಧಿಗಳು, ವಿದ್ಯಾರ್ಥಿಗಳು, ಸ್ಪರ್ಧೆಯಲ್ಲಿ ಇಲ್ಲದಿರುವ ಬಗ್ಗೆ ಮುಚ್ಚಳಿಕೆಪಡೆಯಬೇಕು

***ಉದಾ:*** .

(01) ಯೋಗದಲ್ಲಿ ಅಂತಿಮ ಸ್ಥಿತಿ [ಪೂರ್ಣಸ್ಥಿತಿ] ನಿಲುಗಡೆ. ಸಹಜ ಶ್ವಾಸಕ್ರಿಯೆ, ಮುಖದಲ್ಲಿ ಮುಗುಳ್ನಗೆ.

(02) ಸಂಗೀತದಲ್ಲಿ, ಭಾವ, ಮಾಧುರ್ಯ, ಲಯ, ತಾಳ, ಸಾಹಿತ್ಯ,

(03) ನೃತ್ಯ : ಲಯ, ಬಂಗಿ, ಭಾವ.

(04) ನಾಟಕ : ರಂಗಸಜ್ಜಿಕೆ, ಬೆಳಕು, ವಾಚಿಕಾಭಿನಯ, ಆಂಗಿಕಾಭಿನಯ, ನಿಲುವು, ವಸ್ತ್ರಾಲಂಕಾರ, ಪ್ರಸಾದನ.

ನೃತ್ಯ ಹಾಗೂ ನಾಟಕದ ಸ್ಪರ್ಧೆಗಳಲ್ಲಿ ಪಠ್ಯಕ್ಕೆ, ಪರಿಸರ, ಸಮಾಜದಲ್ಲಿರುವ ಮೌಢ್ಯಗಳ ಬಗ್ಗೆ ಹಾಗೂ ವೈಜ್ಞಾನಿಕ ತಿಳುವಳಿಕೆ ನೀಡುವಂತಹ ಕಥಾವಸ್ತುವಿನಿಂದ ಕೂಡಿರಬೇಕು.

ನಿರ್ದೇಶಕರು [ಪ್ರೌಢ ಶಿಕ್ಷಣ]

## *ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ:*

***01.*** ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತ ಭಾಷಾ ಶಿಕ್ಷಣ, ಡಿ.ಎಸ್.ಇ.ಆರ್.ಟಿ., ಪಠ್ಯಪುಸ್ತಕ ಸಂಘ, ಕ.ಪ್ರೌ.ಶಿ.ಪ.ಮಂಡಳಿ, ಇತರೆ ಪರೀಕ್ಷೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಗುಲ್ಬರ್ಗಾ, ಎಸ್.ಐ.ಎಸ್., ಎಲ್.ಇ.ಪಿ., ಧಾರವಾಡ ಎಸ್.ಎಸ್.ಎ., ಆರ್.ಎಂ.ಎಸ್.ಎ.,.

***02.*** ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯದರ್ಶಿಗಳು, ಮೈಸೂರು, ಗುಲ್ಬರ್ಗಾ, ಬೆಂಗಳೂರು, ಬೆಳಗಾಂ.

***03.*** ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು, ಮೈಸೂರು, ಗುಲ್ಬರ್ಗಾ, ಬೆಳಗಾಂ.

***04.*** ಪ್ರಾಂಶುಪಾಲರು, ಸಿ.ಟಿ.ಇ., ಜಮಖಂಡಿ, ಬೆಳಗಾವಿ, ಗುಲ್ಬರ್ಗಾ, ಚಿತ್ರದುರ್ಗ, ಮೈಸೂರು, ಮಂಗಳೂರು, ಎಸ್.ಡಬ್ಲ್ಯೂ.ಎಫ್ / ಟಿ.ಬಿ.ಎಫ್., ಎಂ.ಎಂ.ಎಸ್.,.

***05.*** ಸಹ ನಿರ್ದೇಶಕರು [ದೈಹಿಕ ಶಿಕ್ಷಣ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

***06.*** ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ.

***07.*** ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ.

***08.*** ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.

***09.*** ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಖಜಾನಾಧಿಕಾರಿಗಳು, ಪ್ರಥಮಾದ್ಯತೆಯಲ್ಲಿ ಬಿಲ್ಲ್ ಪುರಸ್ಕರಿಸಲು ಕೋರಿದೆ.

***10.*** ಮುಖ್ಯಲೆಕ್ಕಾಧಿಕಾರಿಗಳು ಹಾಗೂ ಲೆಕ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

***11.*** ರಾಜ್ಯದ ಎಲ್ಲಾ ವಿಭಾಗೀಯ ಅಧೀಕ್ಷಕರು [ಸಂಗೀತ, ನೃತ್ಯ, ನಾಟಕ], ಮತ್ತು ವಿಷಯ ಪರಿವೀಕ್ಷಕರು [ಚಿತ್ರಕಲೆ] ಇವರಿಗೆ ಮಾಹಿತಿಗಾಗಿ.

***12.*** ಉಪನಿರ್ದೇಶಕರು [ಯೋಜನೆ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

***13.*** ಸಹಾಯಕ ನಿರ್ದೇಶಕರು, ಕೇಂದ್ರಸ್ಥಾನ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

***14.*** ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು–560001.

***15.*** ಕಛೇರಿ ಪ್ರತಿ.

## *ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.*

***01.*** ಮಾನ್ಯ ಕಾರ್ಯದರ್ಶಿಗಳು [ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ], ಬಹುಮಹಡಿಗಳ ಕಟ್ಟಡ.

***02.*** ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

***03.*** ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ,

***04.*** ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಧಾರವಾಡ ಮತ್ತು ಗುಲ್ಬರ್ಗಾ